ಶ್ರೀ ಜೆ. ಎಚ್. ಪಟೀಲ್.—ಮಾನ್ಯ ಸದಸ್ಯರು ಅಭಾವ ಪೀಡಿತ ಪ್ರದೇಶಗಳಲ್ಲಿ ಪಂಪ್‌ಸೆಟ್ಟುಗಳಿಗೆ ವಿದ್ಯುತ್‌ನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಬೇಕೆಂದು ಹೇಳಿದರು. ಈಗಾಗಲೇ ಕೋಲಾರ ಜಿಲ್ಲೆಯಲ್ಲಿ ಬೇರೆ ಎಲ್ಲ ಜಿಲ್ಲೆಗಳಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿನ ಪಂಪ್‌ಸೆಟ್ಟುಗಳಿಗೆ ವಿದ್ಯುತ್ ಒದಗಿಸಲು ಪ್ರಯತ್ನ ಮಾಡಿದ್ದೇವೆ. ಅದೇ ರೀತಿ ಬೇರೆ ಜಿಲ್ಲೆಗಳಿಗೂ ವಿದ್ಯುತ್ ಒದಗಿಸಲು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಬಸವರಾಜ ಪಾಟೀಲ್.—ನಮ್ಮ ರಾಯಚೂರು ಜಿಲ್ಲೆಯ ಲಿಂಗಸಗೂರು ಈ ಯೋಜನೆಯ ಅಡಿಯಲ್ಲಿ ಸೇರಿ ೫ ವರ್ಷಗಳಾದರೂ ಸಹ ಇನ್ನೂ ಕಾರ್ಯಗತಗೊಳಿಸಿಲ್ಲ. ಅಲ್ಲಿಗೆ ವಿದ್ಯುತ್ ಸಾಮಗ್ರಿಗಳನ್ನು ಕಳುಹಿಸಿಕೊಡುವ ಬಗ್ಗೆಯೂ ಸಹ ಮಲತಾಯಿ ಧೋರಣೆಯನ್ನು ಅನುಸರಿಸಲಾಗುತ್ತಿದೆ. ಆದ್ದರಿಂದ ಇದರ ಬಗ್ಗೆ ತಾವು ಏನು ಕ್ರಮ ಕೈಕೊಳ್ಳುತ್ತೀರಿ ?

ಶ್ರೀ ಜೆ. ಎಚ್. ಪಟೀಲ್.—ಈಗಾಗಲೇ ಇದರ ಬಗ್ಗೆ ಉತ್ತರ ಕೊಟ್ಟಿದ್ದೇನೆ. ಮಾನ್ಯ ಸದಸ್ಯರ ಕಳಕಳಿ ಏನಿದೆ ಅದನ್ನು ಅರ್ಥಮಾಡಿಕೊಂಡು ಕಾರ್ಯಾಚರಣೆ ಮಾಡಲಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಧಾರವಾಡ ಜಿಲ್ಲೆಯಲ್ಲಿ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಒದಗಿಸಲು ಕಂಬ ಇಲ್ಲ, ಅದು ಇಲ್ಲ ಇದು ಇಲ್ಲವೆಂದು ನೆಪ ಹೇಳಿಕೊಂಡು ನಮ್ಮಲ್ಲಿ ವಿದ್ಯುತ್ ಒದಗಿಸುವ ಕಾರ್ಯ ಕ್ರಮ ಜಾರಿಯಲ್ಲಿ ಬರುತ್ತಿಲ್ಲ. ಡಿ.ಡಿ.ಸಿ. ಮೀಟಿಂಗ್‌ನಲ್ಲೂ ಕೂಡ ಐ.ಪಿ. ಸೆಟ್‌ಗಳಿಗೆ ವಿದ್ಯುತ್ ಒದಗಿಸುವ ಬಗ್ಗೆ ಚರ್ಚೆ ಮಾಡಲಾಗಿದೆ. ಕಳೆದ ಆರು ತಿಂಗಳುಗಳಿಂದ ಎಷ್ಟೋ ಪಂಪ್‌ಸೆಟ್‌ಗಳಿಗೆ ಸಂಪರ್ಕ ಮಾಡದೇ ಇರುವುದಕ್ಕೆ ಕಾರಣವೇನು ? ಇದನ್ನು ಮಾನ್ಯಮಂತ್ರಿಗಳು ತಿಳಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಜೆ. ಎಚ್. ಪಟೀಲ್.—ನಮ್ಮ ಬೇಡಿಕೆಗೆ ಅನುಸಾರವಾಗಿ ಸಲಕರಣೆಗಳು ದೊರಕುತ್ತಿಲ್ಲ. ಸಲಕರಣೆಗಳು ದೊರಕದಿರುವುದರಿಂದ ಕೆಲಸ ಕುಂಠಿತವಾಗಿರುವುದು ನಿಜ.

ಬಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಕೊರತೆ ಬಗ್ಗೆ

೧೪. ಶ್ರೀ ಭೀಮಣ್ಣ ಖಂಡ್ರೆ (ಬಾಲ್ಕಿ).—ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಬಾಲ್ಕಿ ಪಟ್ಟಣದ ನೀರು ಸರಬರಾಜು ಅಭಿವೃದ್ಧಿ ಯೋಜನೆ ಶಂಕು ಸ್ಥಾಪನೆಯನ್ನು ಕರ್ನಾಟಕ ರಾಜ್ಯದ ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ ೧೬ನೇ ಮೇ ೧೯೮೨ರಲ್ಲಿ ನೆರವೇರಿಸಿದರೆ?

(ಆ) ನೀರು ಸರಬರಾಜು ಯೋಜನೆ ಅಂದಾಜು ರೂ. ೪೪ ಲಕ್ಷಗಳಲ್ಲಿ ಇಲ್ಲಿಯವರೆಗೆ ಖರ್ಚಿಷ್ಟು

(ಇ) ಬಾಲ್ಕಿ ಪಟ್ಟಣಕ್ಕೆ ಕುಡಿಯುವ ನೀರಿನ ಕೊರತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ

(ಈ) ಸರಕಾರವು ಈ ಯೋಜನೆಯನ್ನು ಒಂದು ವರ್ಷದಲ್ಲಿ ಪೂರ್ಣಗೊಳಿಸುವ ಭರವಸೆ ಕೊಡುವುದೆ ?

(ಉ) ಪುರಸಭೆಯಲ್ಲಿ ಸಾಕಷ್ಟು ನಿಧಿ ಇಲ್ಲದಿರುವುದರಿಂದ ಅದು ಸಾರ್ವಜನಿಕರಿಗೆ ನೀರು ಸರಬರಾಜು ಮಾಡಲು ಅಸಮರ್ಥವಾಗಿದೆಯೆಂಬ ವಿಷಯವು ಸರಕಾರದ ಗಮನಕ್ಕೆ ಬಂದಿದೆಯೇ ?

(ಊ) ಮಾರ್ಚ್, ಏಪ್ರಿಲ್ ಮತ್ತು ಮೇ ೧೯೮೩ ತಿಂಗಳುಗಳಲ್ಲಿ ತಾತ್ಕಾಲಿಕವಾಗಿ ಮತ್ತು ಸಮರ್ಪಕವಾಗಿ ಬಾಲ್ಕಿ ಪಟ್ಟಣದ ಜನತೆಗೆ ನೀರು ಸರಬರಾಜು ಮಾಡಲು ಸಾಕಷ್ಟು ನಿಧಿಯನ್ನು ಸರ್ಕಾರವು ಒದಗಿಸುವುದೆ ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

(ಅ) ಹೌದು.

(ಆ) ಈ ಯೋಜನೆಗೆ ಮಂಜೂರಾಗಿರುವ ೪೫ ಲಕ್ಷ ರೂ. ಗಳಲ್ಲಿ ಜನವರಿ ೮೩ರ ಅಂತ್ಯದವರೆಗೆ ರೂ. ೧,೦೨,೫೧೬ ಗಳು ಖರ್ಚಾಗಿದೆ.

(ಇ) ಹೌದು, ಹಾಲಿ ಇರತಕ್ಕ ಜನಸಂಖ್ಯೆಗೆ ದಿನಂಪ್ರತಿ ೧.೩೦ ಲಕ್ಷ ಗ್ಯಾಲನ್ ನೀರು ಸರಬರಾಜು ಆಗುತ್ತಿದೆ.

(ಈ) ಹಣದ ಕೊರತೆಯಿಂದಾಗಿ ಈ ಯೋಜನೆಯನ್ನು ಒಂದು ವರ್ಷದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ. ೧೯೮೪-೮೫ನೇ ಸಾಲಿನಲ್ಲಿ ಈ ಯೋಜನೆಯನ್ನು ಪೂರ್ಣಗೊಳಿಸಲು ಕಾರ್ಯ ಕ್ರಮವನ್ನು ಇಟ್ಟುಕೊಳ್ಳಲಾಗಿದೆ,

(ಉ) ಪ್ರಶ್ನೆಗೆ ಕೊಟ್ಟಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

(ಊ) ಅಭಿವೃದ್ಧಿ ಯೋಜನೆಯಲ್ಲಿ ಈ ವರ್ಷದಲ್ಲಿರುವ ರೂ. ೩ ಲಕ್ಷಗಳು ಮತ್ತು ಮುಂದಿನ ವರ್ಷದಲ್ಲಿ ಅವಕಾಶ ಮಾಡಿರುವ ರೂ. ೧೩.೭೦ ಲಕ್ಷಗಳಲ್ಲಿ ಸ್ವಲ್ಪ ಹಣವನ್ನು ಉಪಯೋಗಿಸಿಕೊಂಡು ತಾತ್ಕಾಲಿಕ ಪರಿಹಾರ ಕಾರ್ಯವನ್ನು ಮುಂದಿನ ಬೇಸಿಗೆಯಲ್ಲಿ ಕೈಗೊಳ್ಳಲಾಗುವುದು. ಇದಲ್ಲದೆ ಕರ್ನಾಟಕ ರಾಜ್ಯಕ್ಕೆ ಅಭಾವ ಪರಿಹಾರ ಕಾರ್ಯಕ್ರಮಗಳಿಗಾಗಿ ಸರ್ಕಾರವು ಮಂಜೂರು ಮಾಡಿರುವ ರೂ. ೫೦ ಲಕ್ಷ ಗಳಲ್ಲಿ ಬಾಲ್ಕಿ ಪಟ್ಟಣಕ್ಕೂ ಕೂಡ ಕೊಡಲಾಗಿದೆ.

ಒಬ್ಬ ಮಾನ್ಯ ಸದಸ್ಯರು. – ಮಂತ್ರಿಗಳು ಪ್ರಶ್ನೆ ಮತ್ತು ಉತ್ತರ ಏತಕ್ಕೆ ಓದಬೇಕು ?

ಅಧ್ಯಕ್ಷರು.—ಹೊಸ ನಿಯಮಾವಳಿಯ ಪ್ರಕಾರ ಅದೇ ರೀತಿ ಮಾಡಬೇಕಾಗುತ್ತದೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಸರ್ಕಾರದ ಧೋರಣೆಯ ಪ್ರಕಾರ ಬೆಂಗಳೂರಂ ನಗರದಲ್ಲಿ ಪ್ರತಿಯೊಬ್ಬ ಮನುಷ್ಯನಿಗೆ ೪೫ ಗ್ಯಾಲನ್ ಎಂದು ತಾವು ಹೇಳಿದ್ದೀರಿ. ಹಳ್ಳಿಗಳಲ್ಲಿ, ಪಟ್ಟಣಗಳಲ್ಲಿ ಕೊನೆಯ ಪಕ್ಷ ಎಷ್ಟು ನೀರು ಒದಗಿಸಬೇಕೆಂದು ತಮ್ಮ ಸರ್ಕಾರದ ಧೋರಣೆ ಇದೆ ?

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ನಗರದಲ್ಲಿ ನೀರು ಸರಬರಾಜು ಸಾಕಾಗುತ್ತಿಲ್ಲ. ಈಗ ಕೇವಲ ೧೮ ಗ್ಯಾಲನ್ ಕೊಡುತ್ತಿದ್ದೇವೆ. ಇನ್ನು ಮುಂದೆ ಅದಂ ೧೫ ರಿಂದ ೧೨ ಗ್ಯಾಲನ್‌ಗಳಿಗೆ ಇಳಿಯುತ್ತದೆ. ನಮ್ಮ ಯೋಜನೆ ಪೂರ್ತಿ ಆದ ಪಕ್ಷದಲ್ಲಿ ಎಷ್ಟು ನೀರು ಒದಗಿಸಬೇಕೋ ಅಷ್ಟು ಒದಗಿಸಲಾಗುತ್ತದೆ. ಈಗ ತಲಾ ೬ ರಿಂದ ೮ ಗ್ಯಾಲನ್ ನೀರು ಸರಬರಾಜು ಆಗುತ್ತಿದೆ. ಪೆಚ್ಚಿಗೆ ನೀರು ಕೊಡಬೇಕು ನಿಜ. ಕಾರಣ ಹಣದ ಕೊರತೆ ಇದೆ. ಹಣದ ವ್ಯವಸ್ಥೆಯಾದರೆ ನೀರಿನ ವ್ಯವಸ್ಥೆಯಾಗ ಬಹುದು. ಜಲಮೂಲ ಪ್ರಯತ್ನಗಳಿಂದ ಆ ಕಾರ್ಯವನ್ನು ಮಾಡುತ್ತೇವೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—೪೦ ಗ್ಯಾಲನ್ ಪರ್ ಹೆಡ್ ಎಂದು ಇದೆ, ಇದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ಚಂದ್ರಶೇಖರ್.—ಬಂದಿದೆ. ಕೆಲವಾರು ತೊಂದರೆಗಳಿಂದ ಆದು ಸಾಧ್ಯವಾಗುತ್ತಿಲ್ಲ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಸಾಕಷ್ಟು ನೀರನ್ನು ಒದಗಿಸಲು ಪ್ರಯತ್ನ ಮಾಡಲಾಗುತ್ತಿದೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—ಬಾಲ್ಕಿ ಟೌನ್‌ನಲ್ಲಿ ನೀರಿನ ಅಭಾವವಿದೆ. ನೀರು ಇಲ್ಲದೆ ಜನಗಳು ಊರನ್ನು ಬಿಡುತ್ತಿದ್ದಾರೆ. ನೀರಿನ ವ್ಯವಸ್ಥೆಗಾಗಿ ೪೦ ಲಕ್ಷ ರೂಪಾಯಿ ಬೇಕೆಂದು ಕೇಳಿದ್ದಾರೆ. ಒಂದೆರಡು ಲಕ್ಷ ಚಿಲ್ಲರೆ ಕೊಟ್ಟರೂ ಆದು ಕೂಡ ಖರ್ಚು ಆಗಿಲ್ಲ, ಇದಕ್ಕೆ ಕಾರಣವೇನು ? ಇದರಲ್ಲಿ ಯಾರದು ತಪ್ಪು ಇದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ಚಂದ್ರಶೇಖರ್.—ಜನವರಿಯಲ್ಲಿ ೧ ಲಕ್ಷದ ೨ ಸಾವಿರ ರೂಪಾಯಿ ಖರ್ಚು ಆಗದೇ ಹಾಗೆಯೇ ಉಳಿದಿದ್ದದ್ದು ನಿಜ. ಆದರೆ ಈಗ ಇದುವರೆಗೆ ೩ ಲಕ್ಷ ರೂಪಾಯಿ ಖರ್ಚಾಗಿದೆ, ಯಾವ ರೀತಿ ಖರ್ಚಾಗಿದೆ ಅಂದರೆ ಎಲ್ಲೆಲ್ಲಿ ನೀರಿನ ಅವಶ್ಯಕತೆ ಇದೆ ಅಂತಹ ಕಡೆಗಳಲ್ಲಿ ಕೊಳವೆಭಾವಿ ತೊಡ ಲಾಗಿದೆ, ಕುಡಿಯುವ ನೀರಿನ ಬಗ್ಗೆ ವಿಶೇಷವಾದ ವ್ಯವಸ್ಥೆ ಮಾಡಲಾಗಿದೆ, ಅದಕ್ಕೋಸ್ಕರ ೪ ಲಕ್ಷ ರೂಪಾಯಿಗಳನ್ನು ತೆಗೆದು ಇಟ್ಟಿದ್ದೇವೆ. ಆ ಹಣ ಈ ವರ್ಷ ಪೂರ್ತಿ ಖರ್ಚಾಗುತ್ತದೆ;

ಶ್ರೀ ಎಸ್. ಭೀಮಣ್ಣ ಖಂಡ್ರೆ.—೧ ಲಕ್ಷದ ೩೦ ಸಾವಿರ ಗ್ಯಾಲನ್ ನೀರು ಸರಬರಾಜು ಮಾಡುತ್ತೇವೆಂದು ತಾವು ಏನು ಹೇಳಿದ್ದೀರಿ ಅದು ತಪ್ಪು. ಪರ್ ಹೆಡ್ ೨ ಗ್ಯಾಲನ್ ಕೂಡ ಬರುತ್ತಿಲ್ಲ, ಮಂತ್ರಿಗಳು ಮತ್ತೊಮ್ಮೆ ವೈರಿಫೈ ಮಾಡಿ ಹೇಳಬೇಕು. ಭಾಲ್ಕಿ ಟೌನ್‌ಗೆ ಬರುವ ಬೇಸಿಗೆಯಲ್ಲಿ ಯಾವ ರೀತಿ ನೀರು ಒದಗಿಸುತ್ತೀರಿ ? ಎಷ್ಟು ಹಣ ಖರ್ಚುಮಾಡುತ್ತೀರಿ ? ತಾವು ಕೊಟ್ಟಿರುವ ೫೦ ಲಕ್ಷ ರೂಪಾಯಿ ಸಾಕಾಗುವುದಿಲ್ಲ ಅಲ್ಲಿ ನೀರಿನ ಅಭಾವ ತುಂಬಾ ಇದೆ. ತಾವು ಕೊಟ್ಟಿರುವ ಹಣ ಕೂಡ ಸರಿಯಾದ ರೀತಿಯಲ್ಲಿ ಖರ್ಚಾಗುತ್ತಿಲ್ಲ. ಜಿಲ್ಲಾಧಿಕಾರಿಗಳು ಹಣ ಮಂಜೂರು ಆಗಿದೆ ಆದರೆ ಅದು ಇನ್ನೂ ನಮ್ಮ ಕೈ ಸೇರಿಲ್ಲವೆಂದು ಹೇಳುತ್ತಾರೆ. ಹಣ ಮಂಜೂರು ಆಗಿ ೨೦ ದಿವಸ ಆದರೂ ಜಿಲ್ಲಾಧಿಕಾರಿಗಳ ಕೈ ಸೇರಿಲ್ಲ. ಅವರು ನಮ್ಮ ಹತ್ತಿರ ಹಣವಿಲ್ಲವೆಂದು ಹೇಳುತ್ತಾರೆ. ನಮ್ಮ ಜಿಲ್ಲಾಧಿಕಾರಿಗಳು ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ ೩ ಲಕ್ಷ ರೂಪಾಯಿ ಬೇಕೆಂದು ತಮಗೆ ಸ್ಪಷ್ಟವಾಗಿ ಬರೆದಿದ್ದಾರೆ. ನಮ್ಮಲ್ಲಿ ಓಪನ್ ವೆಲ್ ಇಲ್ಲ, ಕೊಳವೆ ಭಾವಿ ಇಲ್ಲ, ಮಿಷನ್ ಇದ್ದರೆ ರಿಗ್ ಇರುವುದಿಲ್ಲ. ಇವೆಲ್ಲಾ ಇದ್ದರೂ ಹಣ ಇರುವುದಿಲ್ಲ. ಹಣ ಇಲ್ಲದೇ ಇದ್ದರೆ ಅವರು ಏನು ಮಾಡುತ್ತಾರೆಂದು ಕೇಳುತ್ತೇನೆ ? ನಾನು ಇದರ ಬಗ್ಗೆ ಒಂದು ಕಾಲಿಂಗ್ ಅಟೆನ್‌ಷನ್ ಕೂಡ ಕೊಟ್ಟಿದ್ದೇನೆ. ಸರ್ಕಾರ ಇದರ ಬಗ್ಗೆ ಸಮರ್ಪಕವಾದ ಉತ್ತರ ಕೊಡಬೇಕು.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರು ಪ್ರಶ್ನೆಗಳನ್ನು ಕೇಳುತ್ತಾ ಪ್ರತಿ ಮನುಷ್ಯನಿಗೆ ೨ ಗ್ಯಾಲನ್ ನೀರು ಬರುವುದಿಲ್ಲವೆಂದು ಹೇಳಿದರು. ೧೯೮೧ನೇ ಜನಗಣತಿಯ ಪ್ರಕಾರ ಭಾಲ್ಕಿಯ ಜನಸಂಖ್ಯೆ ೧೯ ಸಾವಿರ, ೧ ಲಕ್ಷದ ೩೦ ಸಾವಿರ ಗ್ಯಾಲನ್ ನೀರು ಒದಗಿಸಲಾಗಿದೆ. ಪರ್ ಹೆಡ್ ೬ ರಿಂದ ೭ ಗ್ಯಾಲನ್ ನೀರು ಸಿಗುತ್ತದೆ. ೫೦ ಲಕ್ಷ ರೂಪಾಯಿ ಕೊಟ್ಟಿರುವ ಹಣದಲ್ಲಿ ಜಿಲ್ಲಾಧಿಕಾರಿಗಳವರಿಗೆ ಇನ್ನೂ ಬಂದಿಲ್ಲವೆಂದು ಹೇಳಿದರು ಕಳೆದ ೩-೪ ದಿವಸಗಳಲ್ಲಿ ಬೀದರ್ ಜಿಲ್ಲೆಗೆ ೨.೫ಲಕ್ಷ ರೂಪಾಯಿ ಹಣವನ್ನು ಜಿಲ್ಲಾಧಿಕಾರಿಗಳವರಿಗೆ ಬಿಡುಗಡೆ ಮಾಡಿದ್ದೇವೆ. ಎಲ್ಲೆಲ್ಲಿ ಹಣದ ಬೇಡಿಕೆ ಇದೆ ಅದನ್ನು ನೋಡಿಕೊಂಡು ಹಣವನ್ನು ರಿಲೀಜ್ ಮಾಡುತ್ತಿದ್ದೇವೆ. ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿದೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ.—೩ ಲಕ್ಷ ರೂಪಾಯಿ ಬೇಕೆಂದು ನಮ್ಮ ಜಿಲ್ಲಾಧಿಕಾರಿಗಳವರು ಕೇಳಿದ್ದಾರೆ. ೩ಲಕ್ಷ ರೂಪಾಯಿ ಕೊಡದಿದ್ದರೆ ಕುಡಿಯುವ ನೀರು ಸರಬರಾಜು ಮಾಡುವುದಕ್ಕಾಗುವುದಿಲ್ಲ. ಇವತ್ತು ಸಾಯಃ ಕಾಲದೊಳಗೆ ಹಣವನ್ನು ರಿಲೀಜ್ ಮಾಡುತ್ತೀರಾ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ ಈಗಾಗಲೇ ಸುಮಾರು ೩ ಲಕ್ಷ ರೂಪಾಯಿಗಳ ಹಣ ಬಿಡುಗಡೆಯಾಗಿದೆ. ಆದರೆ ಬೇರೆ ಪತಿಯಿಂದ ನಾವು ಇನ್ನು ಹೆಚ್ಚು ಹಣವನ್ನು ವೆಚ್ಚ ಮಾಡಿದ್ದೇವೆ. ಅಲ್ಲಿ ನೀರಿನ ಅನುಕೂಲತೆಗಾಗಿ ಕೊಳವೆ ಬಾವಿಗಳನ್ನು ತೆಗೆಸುವುದಕ್ಕಾಗಿ ೪ ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡಿದ್ದೇನೆ. ನಿಮ್ಮ ಜಿಲ್ಲೆಯಿಂದ ಬರತಕ್ಕಂತಹ ಹಣವನ್ನು ತಾವು ಬೋರ್ಡ್‌ಗೆ ಕೊಡಿಸುವಂತಹ ವ್ಯವಸ್ಥೆಯನ್ನು ಮಾಡಿ.

ಶ್ರೀ ಭೀಮಣ್ಣ ಖಂಡ್ರೆ.—ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಆದರೆ ನಾವು ಡಿ. ಸಿ. ಯವರನ್ನು ಕೇಳಿದರೆ ಅವರು ಅಲ್ಲಿ ಹಣ ಇಲ್ಲವೆಂದು ಹೇಳುತ್ತಾರೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಹೇಳಿದ್ದಾರೆ ೩ ಲಕ್ಷ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ವೆಚ್ಚ ಮಾಡಿದ್ದೇವೆಂದು. ಆದ್ದರಿಂದ ಮುಂದಿನ ಪ್ರಶ್ನೆಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಿ.

ಪ್ರಶ್ನೆ ಸಂಖ್ಯೆ ೧೫

ಅಧ್ಯಕ್ಷರು.—ಈ ಪ್ರಶ್ನೆಗೆ ಸರಿಯಾದ ಮಾಹಿತಿ ಬಂದಿಲ್ಲದ ಕಾರಣ ತಡೆಹಿಡಿಯಲಾಗಿದೆ.